**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2071\2013\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:25/05/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಎಸ್.ಬಾಲಯ್ಯ ಬಿನ್ ಸಣ್ಣಪ್ಪ, ನೇರಳಕೆರೆ, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ಮಿಡಿಗೇಶಿ ಹೋಬಳಿ ನೇರಳೆಕೆರೆ ನಿವಾಸಿಯಾದ ಶ್ರೀ.ಎಸ್.ಬಾಲಯ್ಯ ಬಿನ್ ಸಣ್ಣಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ 1) ತಹಶೀಲ್ದಾರಾದ ಶ್ರೀ.ಕೆ.ರಮೇಶ್ ಮತ್ತು 2) ಭೂ ದಾಖಲೆಗಳ ಸಹಾಯಕ ನಿರ್ದೇಶಕರಾದ ಶ್ರೀ.ಮಂಜುನಾಥ ತವಾನೆ (ಇನ್ನು ಮುಂದೆ "1 ಮತ್ತು 2ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ತಾತ ಶ್ರೀ.ಎಸ್.ಬಾಲಯ್ಯ ಬಿನ್ ಸಣ್ಣಪ್ಪ ಇವರಿಗೆ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ನೇರಳ ಕೆರೆ ಗ್ರಾಮದ ಸರ್ವೆ ನಂ.745/ಪಿ2ರಲ್ಲಿ 12 ಗುಂಟೆ ಜಮೀನು ಬಗರ್ ಹುಕ್ಕುಂ ಸಾಗುವಳಿಯಲ್ಲಿ ತಹಶೀಲ್ದಾರ್ ರವರ ಆದೇಶ ಸಂಖ್ಯೆ: ಎಲ್ಎನ್ಡಿ ಆರ್‌ವಿಸಿ/957/91-92ರಲ್ಲಿ ದಿನಾಂಕ:10.6.1995ರಂದು ಮಂಜೂರಾಗಿದ್ದು, ಆ ಬಗ್ಗೆ ಎಂ.ಆರ್.76/95-96ರಡಿಯಲ್ಲಿ ದಿನಾಂಕ:28.9.1995ರಲ್ಲಿ ಖಾತೆಯಾಗಿದೆ. ಆದರೆ, ಸುಮಾರು 35 ವರ್ಷದಿಂದಲೂ ತಾನೇ ಸದರಿ ಜಮೀನಿನ ಅನುಭವದಲ್ಲಿದ್ದುದ್ದರಿಂದ 1995ರಲ್ಲಿ ಸಾಗುವಳಿ ನೀಡಿದ್ದು ಸಾಗುವಳಿಯಂತೆ ತನ್ನ ಹೆಸರಿನಲ್ಲಿ ಸದರಿ ಜಮೀನಿನ ಮ್ಯುಟೇಶನ್ ಮಾಡಿ ದುರಸ್ಥಿಪಡಿಸಿ ಕೊಡುವಂತೆ ಅರ್ಜಿಯನ್ನು ಕೊಟ್ಟರೂ ಸಹ ಎದುರುದಾರರು ಆಕಾರ್‌ಬಂದ್ ದುರಸ್ಥಿ ಮಾಡಲು ವಿಳಂಬ ಮಾಡುತ್ತಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಮೇಲ್ಕಂಡ ಸರ್ವೆ ನಂ.745ರ ಜಮೀನು ಸರ್ಕಾರಿ ಜಮೀನಾಗಿದ್ದು, ಅದರಲ್ಲಿ ದೂರುದಾರರ ತಾತ ಶ್ರೀ.ಬಾಲಯ್ಯ ಇವರಿಗೆ ಮಂಜೂರಾದ ಅಳತೆ ಮತ್ತು ದುರಸ್ಥಿ ಪೂರೈಸಲು ಮಾನ್ಯ ಆಯುಕ್ತರು ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಬೆಂಗಳೂರು ರವರ ದಿನಾಂಕ:20.10.2008ರ ಹಾಗೂ ದಿನಾಂಕ:12.3.2013ರ ಸುತ್ತೋಲೆಗಳಂತೆ ನಮೂನೆ–1 ರಿಂದ 5ನ್ನು ತಯಾರಿಸಲು ಸದರಿ ಮೂಲ ಮಂಜೂರಿ ಕಡತವನ್ನು ಮಿಡಿಗೇಶಿ ಹೋಬಳಿಯ ರಾಜಸ್ವ ನಿರೀಕ್ಷಕರಿಗೆ ಎದುರುದಾರರು ಕಳುಹಿಸಿದ್ದು, ಸದರಿಯವರು ನಮೂನೆ–1 ರಿಂದ 5ನ್ನು ಭರ್ತಿ ಮಾಡಿ ನೇರಳೆಕೆರೆ ವೃತ್ತದ ಗ್ರಾಮ ಲೆಕ್ಕಿಗರು ಅವುಗಳಿಗೆ ಸಹಿ ಮಾಡಿ ನೀಡಿದ ನಂತರ ಉಪವಿಭಾಗಾಧಿಕಾರಿಗಳು, ಮಧುಗಿರಿ ಉಪ ವಿಭಾಗ ಮತ್ತು ಭೂ ಮಾಪನ ತಾಂತ್ರಿಕ ಸಹಾಯಕರು ಹಾಗೂ ಪಧನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರಿಂದ ಮೇಲು ಸಹಿ ಮಾಡಿಸಿ ಆದಷ್ಟು ಬೇಗ ಭೂ ಮಾಪನ ಶಾಖೆಯ ಪೋಡಿ ಶಾಖೆಗೆ ಸಾಗುವಳಿಯಂತೆ ದುರಸ್ಥಿ ಮಾಡುವ ಬಗ್ಗೆ ಮೂಲ ಮಂಜೂರಿ ಕಡತ ಸಲ್ಲಿಸಲಾಗುವುದು ಈ ಬಗ್ಗೆ ಉಲ್ಲೇಖ–2ರಂತೆ ದಿನಾಂಕ:5.3.2014ರಂದು ತಮ್ಮ ಕಚೇರಿಗೆ ವರದಿ ನೀಡಿದ್ದು ಚುನಾವಣೆ ಕೆಲಸವಿದ್ದ ಕಾರಣ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರು ಕಡತ ತಯಾರಿಸಲು ವಿಳಂಬವಾಗಿದ್ದು, ಕಡತ ತಯಾರಾದ ಕೂಡಲೇ ತುರ್ತಾಗಿ ದುರಸ್ಥಿ ಕಾರ್ಯ ಪೂರೈಸಿ ಕ್ರಮ ಜರುಗಿಸಲಾಗುವುದಾಗಿ ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಮೇಲ್ಕಂಡ ಜಮೀನು ದೂರುದಾರರ ತಾತ ಶ್ರೀ.ಬಾಲಯ್ಯ ನವರಿಗೆ ಮಂಜೂರಾಗಿದ್ದು ಸಾಗುವಳಿಯಂತೆ ದುರಸ್ಥಿ ಪಡಿಸಲು ದೂರುದಾರರು ಅರ್ಜಿಯನ್ನು ಸಲ್ಲಿಸಿದ್ದು, ಈ ಬಗ್ಗೆ ಸದರಿ ಅರ್ಜಿಯ ಪ್ರತಿಯು ತಮಗೆ ಬಂದಿದ್ದು 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದಂತೆ ಅವರ ಕಛೇರಿಯಲ್ಲಿ ನಮೂನೆ–1 ರಿಂದ 5 ಭರ್ತಿ ಮಾಡುವ ಕಾರ್ಯವು ಪ್ರಗತಿಯಲ್ಲಿದ್ದು, ಮಂಜೂರಿಯ ಮೂಲ ಕಡತ ಮತ್ತು ಭರ್ತಿ ಮಾಡಿದ ನಮೂನೆ–1 ರಿಂದ 5 ಇವು 1ನೇ ಎದುರುದಾರರ ಕಛೇರಿಯಿಂದ ನಮ್ಮ ಕಛೇರಿಗೆ ಬಂದ ನಂತರ ಸದರಿ ಜಮೀನಿನ ಅಳತೆ ಕೆಲಸವನ್ನು ಮಾಡಿ ದುರಸ್ಥಿ ಮಾಡಲಾಗುವುದೆಂದು ಹೇಳಿದ್ದಾರೆ.

5. ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಮೇಲ್ಕಂಡ ಜಮೀನಿನ ಅಳತೆಯನ್ನು ಮಾಡಿ ಸಾಗುವಳಿಯಂತೆ ಇಲ್ಲಿಯವರೆಗೂ ಎದುರುದಾರರ ದರಸ್ತಿ ಮಾಡಿಕೊಟ್ಟಿಲ್ಲವೆಂದು ತಿಳಿಸಿ 2014-15ನೇ ಸಾಲಿನ ಸದರಿ ಜಮೀನಿನ ಪಹಣಿ ಪ್ರತಿಯನ್ನು ಮತ್ತು ದಿನಾಂಕ:16.6.1996ರಂದು ಮಂಜೂರಾದ ಗ್ರಾಂಟ್ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಮಧುಗಿರಿ ತಾಲ್ಲೂಕ್ ನೇರಳಕೆರೆ ಗ್ರಾಮದ ಸರ್ವೆ ನಂ.745/ಪಿ2 ರಲ್ಲಿ 12 ಗುಂಟೆ ಜಮೀನು ಬಗರ್ ಹುಕುಂ ಸಾಗುವಳಿಯಲ್ಲಿ ಅಂದಿನ ತಹಶೀಲ್ದಾರ್‌ರವರ ಆದೇಶ ಸಂ:ಎಲ್‌ಎನ್‌ಡಿ. ಆರ್‌ವಿಸಿ\957\91-92ರಂತೆ ದಿ:10/06/1995ರಂದು ಮಂಜೂರಾಗಿದೆ. ಅದರಂತೆ, ಎಂಆರ್ ನಂ.76/95-96ರಡಿಯಲ್ಲಿ ದಿ:28/09/1995ರಂದು ಖಾತಾ ಬದಲಾವಣೆಯಾಗಿರುವುದು ದಾಖಲೆಗಳಿಂದ ಕಂಡು ಬಂದಿದೆ. ಅದೇ ರೀತಿ, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂನೆ-1ರ ಗ್ರ್ಯಾಂಟ್ ಪ್ರಮಾಣ ಪತ್ರದ ಪ್ರತಿಯನ್ವಯ 1ನೇ ಎದುರುದಾರರ ಕಛೇರಿಗೆ ದಿ:16/08/2000ರಂದು ದುರಸ್ತಿ ಕಾರ್ಯ ಮಾಡಿಕೊಡಲು ಅರ್ಜಿ ಸಲ್ಲಿಸಿದೆ. ಆ ನಂತರ, ಮಾನ್ಯ ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ರವರ ದಿ:20/10/08ರ ಹಾಗೂ ದಿ:12/03/13ರ ಸುತ್ತೋಲೆಗಳಂತೆ ನಮೂನೆ-1 ರಿಂದ 5ನ್ನು ತಯಾರಿಸಲು ಮೂಲ ಮಂಜೂರಿ ಕಡತವನ್ನು ರಾಜಸ್ವ ನಿರೀಕ್ಷಕರಿಗೆ ಕಳುಹಿಸಿದ್ದು, 2013 ರಿಂದ ಇಲ್ಲಿಯವರೆಗೂ ಸಹ ಸದರಿ ಕಡತದ ಬಗ್ಗೆ ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲ ಮತ್ತು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ದುರಸ್ತಿ ಕಾರ್ಯವನ್ನು ಸಹ ಮಾಡಿಲ್ಲ. ಯಾವುದೇ ಸ್ವತ್ತು ಸರ್ಕಾರದಿಂದ ಮಂಜೂರಾದ ಸಂದರ್ಭದಲ್ಲಿ ಕಂದಾಯ ದಾಖಲೆಗಳಂತೆ ದುರಸ್ತಿ ಮಾಡಿಕೊಡುವುದು ಆಯಾಯ ತಹಶೀಲ್ದಾರ್‌ರವರಿಗೆ ಸಂಬಂಧಿಸಿದ್ದಾಗಿದೆ. ಸದರಿ ಸ್ವತ್ತು ದೂರುದಾರರಿಗೆ ಸರ್ಕಾರದಿಂದ ಮಂಜೂರಾಗಿದ್ದು, ಸದರಿ ಸ್ವತ್ತಿನಲ್ಲಿ ದುರಸ್ತಿ ಕಾರ್ಯ ಮಾಡಲು ಎದುರುದಾರರಿಗೆ ಅರ್ಜಿ ನೀಡಿದ್ದರೂ ಸಹ ಕರ್ನಾಟಕ ಭೂ ಕಂದಾಯ ಅಧಿನಿಯಮದಂತೆ ಕ್ರಮ ಜರುಗಿಸಿ, ಸದರಿ ಸ್ವತ್ತಿನ ದುರಸ್ತಿ ಕಾರ್ಯ ನಡೆಸಿ, ದಾಖಲೆಗಳನ್ನು ವಿತರಿಸುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಮತ್ತು ಈ ಕಛೇರಿಯಿಂದ ಎದುರುದಾರರಿಗೆ ನಿರ್ದೇಶನ ನೀಡಿ, ಸದರಿ ಸ್ವತ್ತಿನ ಬಗ್ಗೆ ಶೀಘ್ರ ಕ್ರಮ ಕೈಗೊಂಡು ವರದಿ ನೀಡುವಂತೆ ತಿಳಿಸಿದ್ದರೂ ಸಹ ಯಾವುದೇ ಅನುಪಾಲನಾ ವರದಿಯನ್ನು ಸಲ್ಲಿಸದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/

ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಆದ್ದರಿಂದ, ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ನೇರಳಕೆರೆ ಗ್ರಾಮದ ಸರ್ವೆ ನಂ.745/ಪಿ2ರ 12 ಗುಂಟೆ ಜಮೀನಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮದಂತೆ ಕ್ರಮ ಜರುಗಿಸಿ, ಸದರಿ ಸ್ವತ್ತಿನ ದುರಸ್ತಿ ಕಾರ್ಯ ನಡೆಸಿ, ದಾಖಲೆಗಳನ್ನು ವಿತರಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 25/5/13.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**

**ಉಪಲೋಕಾಯುಕ್ತ-2,**

**ಕರ್ನಾಟಕ ರಾಜ್ಯ.**